


ಅಮೃತಾ ಪ್ರೀತಂ



ಕಮಲಾ ದಾಸ್



ಅನಿತಾ ದೇಸಾಯಿ




ಇಸ್ಮತ್ ಚುಗ್ತಾಯಿ



ಎಂ.ಕೆ. ಇಂದಿರಾ



ತ್ರಿವೇಣಿ



ಅನುಪಮಾ ನಿರಂಜನ



ವೀಣಾ ಶಾಂತೇಶ್ವರ

ಭಾರತದ ವಿವಿಧ ರಾಜ್ಯಗಳಲ್ಲಿ ಅಲ್ಲಲ್ಲಿ ಮಹಿಳೆಯರು ಬರಹ ಪ್ರಾರಂಭಿಸಿದ್ದರೂ ಪಶ್ಚಿಮ ಬಂಗಾಲ ಮತ್ತು ಮಹಾರಾಷ್ಟ್ರದ ಮಹಿಳೆಯರು ಹೆಚ್ಚು ಸ್ಪಂದನಾಶೀಲತೆಯಿಂದ ಬರೆಯತೊಡಗಿದ್ದರು ಎಂದು ಮಹಿಳಾ ಸಾಹಿತ್ಯದ ಇತಿಹಾಸ ಹೇಳುತ್ತದೆ. ಪಂಡಿತಾ ರಮಾಬಾಯಿ, ರಮಾಬಾಯಿ ರಾನಡೆ, ಕೃಪಾಬಾಯಿ ಸತ್ಯನಾಥನ್, ತಾರಾಬಾಯಿ ಶಿಂಧೆ, ಮುಕ್ತಾಬಾಯಿ, ರಾಸುಂದರಿ ದೇವಿ, ಕೈಲಾಸವಾಸಿನಿ ದೇವಿ, ಕಾರ್ನೀಲಿಯಾ ಸೋರಬ್ ಜಿ, ಸ್ವರ್ಣಕುಮಾರಿ ದೇವಿ, ತೋರುದತ್ - ಇವರು ಮತ್ತು ಇನ್ನೂ ಅನೇಕ ಜಾಗೃತ, ಪ್ರಜ್ಞಾವಂತ ಮಹಿಳೆಯರು ಭಾರತದಲ್ಲಿ ಮಹಿಳಾ ಸಂವೇದನೆಗೆ, ಬರವಣಿಗೆಗೆ ಹೊಸ ಜಾಡನ್ನು ಅರಸಿದರು, ನವ ದಿಕ್ಕು ತೋರಿದರು.

ಅಂದಿನ ಕಾಡುವ ಸಮಸ್ಯೆಗಳಾಗಿದ್ದ ವಿದ್ಯಾಹೀನತೆ, ವರದಕ್ಷಿಣೆ, ಬಾಲ್ಯವಿವಾಹ, ಜಾತಿ ತಾರತಮ್ಯ, ಸ್ತ್ರೀ ಧರ್ಮದ ಕಾಠಿಣ್ಯ, ಧರ್ಮ ಸಂಘರ್ಷ, ಪುರುಷರ ಅಹಮಿಕೆ ಮತ್ತು ಅತ್ಯಾಚಾರ, ಅವಿದ್ಯಾವಂತ ಸ್ತ್ರೀಯರ ಮೌಢ್ಯ ಮುಂತಾದ ವಿಷಯಗಳನ್ನು ಸ್ವಾನುಭವದ ವೃತ್ತಾಂತಗಳ ಮೂಲಕ ಹತ್ತೊಂಬತ್ತನೇ ಶತಮಾನದ ಲೇಖಕಿಯರು ವಿಮರ್ಶಾತ್ಮಕವಾಗಿ, ಚಿಕಿತ್ಸಕ ದೃಷ್ಟಿಯಿಂದ ಬರಹ ರೂಪಕ್ಕೆ ತಂದ ಪರಿ ಕಂಡರೆ ಬೆರಗುಂಟಾಗುತ್ತದೆ.

ಹೀಗೆ ಅನೇಕ ಕಾಲಮಾನ, ಮಜಲು, ಆಯಾಮಗಳಲ್ಲಿ ಆರಂಭವಾದ ಮಹಿಳಾ ಸಾಹಿತ್ಯದ ಹುರುಪು ಕ್ಷೀಣಿಸದೇ ಇಂದಿಗೂ ಮುಂದೆ ಸಾಗುತ್ತ ಬಂದಿದೆ. ಆ ಎಲ್ಲ ಛಾತಿವಂತ ಮಹಿಳೆಯರ ಮುಂದುವರಿಕೆಯಾಗಿ ಇಪ್ಪತ್ತನೇ ಶತಮಾನದ ಆದಿಯಿಂದ ಭಾರತದಾದ್ಯಂತ ಅಕ್ಷರ ಕಲಿತ ಮಹಿಳೆಯರಲ್ಲನೇಕರು ತಮ್ಮ ಬದುಕಿಗೂ, ಸುತ್ತಣ ಸಮಾಜ, ಪ್ರಪಂಚಕ್ಕೂ ಅನುಸಂಧಾನ ಮಾಡಿಕೊಳ್ಳುತ್ತ ಬರೆಯಲಾರಂಭಿಸಿದರು. ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ ಮಹಿಳಾ ಶಿಕ್ಷಣ, ಬಾಲ್ಯವಿವಾಹ, ಮದುವೆಯ ಸಂಕೋಲೆ ತಂದ ನಿರ್ಬಂಧ, ಮಹಿಳೆಯರ ಮಾನಸಿಕ ದೈಹಿಕ ಆರೋಗ್ಯದತ್ತ ಇದ್ದ ನಿರ್ಲಕ್ಷ್ಯ, ವೈಧವ್ಯ ಮತ್ತದರ ಹಿಂಸಾತ್ಮಕ ಆಯಾಮಗಳು ಲೇಖಕಿಯರ ಬರಹಗಳ ವಸ್ತುಗಳಾದವು. ಸ್ವಾತಂತ್ರ್ಯಾನಂತರ ಭಾರತದ ವಿಭಜನೆ ಮಹಿಳೆಯರಿಗೆ ಉಂಟುಮಾಡಿದ